**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು</u>**

**<u>ಸಿ.ಸಿ. ನಂಬರು 229/2020</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪವಿತ್ರ | ಚಾಸಾ.1 |
| ತಂದೆಯ ಹೆಸರು | : | ತಿಮ್ಮಪ್ಪ | ಫ್ರಾಸಾ.1 |
| ವಯಸ್ಸು | : | 42 ವರ್ಷ | |
| ವೃತ್ತಿ | : | ಕುರಿ ಕಾಯುವ ಕೆಲಸ | |
| ವಾಸಸ್ಥಳ | : | ಆರ್.ಜಿ.ಕೊಪ್ಪಲು, ಕಡೂರು | |

**ದಿನಾಂಕ 02.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ :ಮಾನ್ಯ ಎ.ಪಿ.ಪಿ. ರವರಿಂದ :-</u>**

ಮೃತ ವ್ಯಕ್ತಿ ರವಿ ನನ್ನ ಚಿಕ್ಕಪ್ಪನ ಮಗನಾಗಬೇಕು. ಆರೋಪಿಯ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಮತ್ತು ಮೃತ ರವಿ ಕುರಿ ಕಾಯಲು ಹೋಗಿರುವುದಿಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನಿಪಿ.1 ರ ದೂರಿಗೆ ಯಾವಾಗ, ಎಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ರ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ದಿನಾಂಕ 22.05.2019 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಜಿ.ತಿಮ್ಮಾಪುರ ಗೇಟ್ ಸಮೀಪ ಇರುವ ರಾಜಪ್ಪ ಬಿನ್ ತಿಮ್ಮಯ್ಯ ಹಾಗೂ ಸಿದ್ದಪ್ಪ ಬಿನ್ ಮುಳ್ಳಪ್ಪರವರ ಜಮೀನಿನ ಮಧ್ಯೆ ಹಾದು ಹೋಗಿರುವ ಕಡೂರು–ಬಾಣಾವರ ನಡುವಿನ ಎನ್.ಹೆಚ್.–206 ರ ರಸ್ತೆಯಲ್ಲಿ ಚಾಸಾ–12 ರವರು ರಸ್ತೆ ಫುಟ್‌ಪಾತಿನಲ್ಲಿ ತಳ್ಳುವ ಗಾಡಿಯಲ್ಲಿ ಪಾನಿಪುರಿ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು, ಅಲ್ಲಿಗೆ ಪಾನಿಪುರಿ ತಿನ್ನಲೆಂದು ಚಾಸಾ–17 ರವರ ತಮ್ಮ ಈತನು ನಿಂತು ಪಾನಿಪುರಿ ತಿನ್ನುತ್ತಿದ್ದಾಗ ಅದೇ ಸಮಯದಲ್ಲಿ ಕಡೂರು ಕಡೆಯಿಂದ ಚಾಸಾ–11 ರವರ ಕೆಎ–66/ಹೆಚ್–7929 ರ ಮೋಟಾರು ಬೈಕಿನಲ್ಲಿ ಚಾಸಾ–13 ರವರನ್ನು ಹಿಂಬದಿ ಸೀಟಿನಲ್ಲಿ ಕೂರಿಸಿಕೊಂಡು ರಸ್ತೆಯ ಎಡಬದಿಯಲ್ಲಿ ಚಲಾಯಿಸಿಕೊಂಡು ಬರುತ್ತಿರುವಾಗ ಅದೇ ಸಮಯದಲ್ಲಿ ಬಾಣಾವರ ಕಡೆಯಿಂದ ಆರೋಪಿಯು ಕೆಎ–44/8717 ರ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಕಾರನ್ನು ನಿಯಂತ್ರಿಸಲಾಗದೆ ರಸ್ತೆಯ ಬಲಬದಿಗೆ ಹೋಗಿ ಚಾಸಾ–11 ರವರ ಮೋಟಾರು ಬೈಕಿಗೆ ಡಿಕ್ಕಿಪಡಿಸಿ ಪುನಃ ಕಾರನ್ನು ರಸ್ತೆಯ ಎಡಬದಿಗೆ ಎಳೆದುಕೊಂಡಾಗ ರಸ್ತೆಯ ಫುಟ್‌ಪಾತಿನಲ್ಲಿ ಪಾನಿಪುರಿ ತಿನ್ನುತ್ತಿದ್ದ ರವಿ ಹಾಗೂ ಚಾಸಾ–12 ರವರ ಗಾಡಿಗೆ ಗುದ್ದಿಸಿ ನಂತರ ಕಾರನ್ನು ಹುಣಸೆಮರಕ್ಕೆ ಅಪಘಾತಪಡಿಸಿದ ಪರಿಣಾಮವಾಗಿ ರವಿಯ ತಲೆಗೆ, ಎರಡು ಕೈಗಳಿಗೆ, ಎಡತೊಡೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಾಸಾ–11 ಮತ್ತು 12 ರವರಿಗೆ ಕಾಲುಗಳಿಗೆ, ಮೈ–ಕೈಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಸಾರ್ವಜನಿಕರು ಸೇರಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ರವಿಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿರುವಾಗ ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ಸಂಜೆ 5.00 ಗಂಟೆಗೆ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ–12 ರವರ ಪಾನಿಪುರಿ ಗಾಡಿ ಜಖಂಗೊಂಡು ರೂ.2,000/–ನಷ್ಟು ನಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ಗಾಯಗಳಿಗೆ ಪ್ರಥಮ ಚಿಕಿತ್ಸೆ ನೀಡದೆ, ಪೊಲೀಸರಿಗೆ ಮಾಹಿತಿ ನೀಡದೆ ಅಪಘಾತ ಸ್ಥಳದಿಂದ ಪರಾರಿಯಾಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವಾಗಿ ದಿನಾಂಕ 22.05.2019 ರಂದು ಪೊಲೀಸ್ ಠಾಣೆಗೆ ಹಾಜರಾಗಿ ನಿಪಿ.1 ರಂತೆ ಆರೋಪಿಯ

ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

C/c. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫ್‌ಸಿ, ಕಡೂರು